


ಐತಿಹಾಸಿಕ ನಗರದ ಸ್ಮೃತಿಗಳನ್ನು ಉಸಿರಾಡುವಂತೆ ಕಾಣಿಸುವ ಇರುಕು ರಸ್ತೆಯ ಹಳೆಯ ಕಟ್ಟಡಗಳು

ಅಪ್ರಕಟಿತ ಹಸ್ತಪ್ರತಿಗಳನ್ನು ಸುಟ್ಟುಬಿಡುವಂತೆ ಸ್ನೇಹಿತನಿಗೆ ಹೇಳಿದ್ದನಂತೆ. ನಮ್ಮ ವರಕವಿ ಬೇಂದ್ರೆಯವರು ತಮ್ಮ ಜೀವನದ ಕೊನೆಯ ಹೊತ್ತಿಗೆ ಸಂಖ್ಯಾಶಾಸ್ತ್ರದ ಮುಖೇನ ಭಾಷೆಯ ಮಿತಿಯನ್ನು ದಾಟಬಹುದು ಎಂದು ಬಲವಾಗಿ ನಂಬಿದಂತಿತ್ತು. 'ಬುದ್ಧನನ್ನು ಭಾಷೆಯಲ್ಲಿ ಹಿಡಿದಿಡಲು ನೋಡಿದ ಪ್ರತಿಯೊಬ್ಬ ಪಂಡಿತನೂ, ವಿಶೇಷವಾಗಿ, ಎರಡು ಸಾವಿರ ವರ್ಷಗಳ ಹಿಂದೆ ಅಂತಹ ಕಾರ್ಯವನ್ನು ಬೃಹತ್ ಪ್ರಮಾಣದಲ್ಲಿ ನಡೆಸಲು ಪ್ರಯತ್ನಿಸಿದ ನಲಂದಾ ವಿಶ್ವವಿದ್ಯಾಲಯದ ಪಂಡಿತರು, ನಾಗಾರ್ಜುನನಂತಹ ಅಸಾಧಾರಣ ಪ್ರತಿಭಾವಂತರನ್ನೂ ಸೇರಿಸಿ, ಅನುಭವಿಸಿದ ಚಿತ್ರಹಿಂಸೆಯೆಂದರೆ ಭಾಷೆಯ ಮಿತಿಯೇ', ಎನ್ನುತ್ತಾರೆ ದಲೈಲಾಮಾ. ದಲೈಲಾಮರಿಗೆ ಭಾಷಣಗಳಲ್ಲಿ, ವಿಶೇಷವಾಗಿ ಬುದ್ಧನ ಬಗ್ಗೆ ಮಾತನಾಡುವಾಗ, ಪದಗಳನ್ನು ಜ್ಞಾಪಿಸಿಕೊಡಲು ಪಕ್ಕದಲ್ಲಿ ಶಿಷ್ಯನೊಬ್ಬ ಕೂರಬೇಕು. ಆದರೆ ಶಿಷ್ಯ ಜ್ಞಾಪಿಸಿಕೊಟ್ಟ ಪದಗಳು ಅವರಿಗೆ ಪೂರ್ಣ ಸಮ್ಮತವಾಗುವುದಿಲ್ಲ. ಒಲ್ಲದ ಮನಸ್ಸಿನಿಂದಲೇ ಮಾತನ್ನು ಮುಂದುವರೆಸುತ್ತಾರೆ.

ಬುದ್ಧನನ್ನು ಓದಬಾರದು, ಬರೀ ಅನುಭವಕ್ಕೆ ತಂದುಕೊಳ್ಳಬೇಕಷ್ಟೆ. ಅದೂ, ವಾರಾಣಸಿಯಲ್ಲಿ... ಕ್ಷಣದಲ್ಲಿ ಮೂಡಿ ಹೋಗುವ ಜ್ಞಾನೋದಯವದು. ಚಕ್ರದ ಮುಳ್ಳು ನಮಗರಿವಿಲ್ಲದಂತೆ ತಿರುಗಿ ಸ್ಥಿತಿಯಿಂದ ಸ್ಥಿತಿಗೆ ಬದಲಾಗುವ ಮುನ್ನ ತೆಗೆದುಕೊಳ್ಳುವ ನ್ಯಾನೋಸೆಕೆಂಡುಗಳ ಅವಸ್ಥೆಯಂತೆ. ಬರೆದಿಡಲು ಯಾರಿಗೆ ಸಾಧ್ಯ? ಬೆಳಕಿನ ಕಿರಣದ ವೇಗದೊಂದಿಗೆ ಗುಬ್ಬಿಯೊಂದು ಸ್ಪರ್ಧಿಸಿದಂತೆ. ವಾರಾಣಸಿಯ ವಿಶ್ವನಾಥನೂ ಕೋಟಿ ಕೋಟಿಜನರಿಗೆ ಇದೇ ಬಗೆಯ ಅವಸ್ಥೆಯನ್ನು ಕರುಣಿಸುತ್ತಾನೆ. ಹೇಳಲಾಗುವುದಿಲ್ಲ ಬರೆಯಲಾಗುವುದಿಲ್ಲ, ಬೆಳಕಾಗಿ ನಮ್ಮನ್ನು ಹೊಕ್ಕುವ ಅಮೃತವಾಹಿನಿಯಷ್ಟೇ.

ಬೌದ್ಧರ ನಂಬಿಕೆಯಲ್ಲಿ ಶಾಶ್ವತವೆಂಬುದಿಲ್ಲ. ಎಲ್ಲವೂ ಅತಿ ಎಂಬಷ್ಟು, ಹಿಡಿಯಲಾರದಷ್ಟು, ಕ್ಷಣಿಕ. ಹರಿವ ನದಿಯಲ್ಲಿ ನೀವು ಮುಳುಗುಹಾಕಿ ಎದ್ದಿರಾದರೆ ಮುಳುಗಿದ ನದಿ ಬೇರೆ, ಎದ್ದ ನದಿ ಬೇರೆ. ಟಿಬೇಟಿಯನ್ನರ ಧರ್ಮಗ್ರಂಥಗಳಲ್ಲಿ ದೃಷ್ಟಾಂತವಾಗಿ ಒಂದು ಕತೆ ಬರುತ್ತದೆ. ನದಿಯಲ್ಲಿ ದೋಣಿಯಲ್ಲಿ ಹೋಗುತ್ತಿರುವಾಗ ಒಬ್ಬ ಸೇನಾನಾಯಕನ ಕತ್ತಿ ನೀರಿಗೆ ಬಿದ್ದು ಕೊಚ್ಚಿಹೋಗುತ್ತದೆ. ಬೆಲೆಬಾಳುವುದಾದ್ದರಿಂದ ನೀರಿಗೆ ಧುಮುಕಿ ಹುಡುಕಿ ತರುವುದು ಸೂಕ್ತ ಎಂದು ದೋಣಿಯಲ್ಲಿದ್ದವರು ಅಭಿಪ್ರಾಯಪಡುತ್ತಾರೆ. ಸೈನ್ಯಾಧಿಕಾರಿ ಮಾತ್ರ ಶಾಂತನಾಗಿ ಉತ್ತರಿಸುತ್ತಾನೆ. 'ನದಿಯೂ ಚಲಿಸುತ್ತಿದೆ, ದೋಣಿಯೂ ಚಲಿಸುತ್ತಿದೆ. ಕಳೆದುದನ್ನು ಹುಡುಕುವುದು ಬೇಡ'. ಬೌದ್ಧರ ಪ್ರಕಾರ ಜೀವವೆನ್ನುವುದು ಸ್ವತಂತ್ರ ಕ್ಷಣಗಳ ಒಟ್ಟು ಮೊತ್ತ. ಒಂದು ಕ್ಷಣದಿಂದ ಮತ್ತೊಂದು ಕ್ಷಣಕ್ಕೆ ಏನನ್ನೂ, ನೆನಪುಗಳನ್ನೂ ಸೇರಿಸಿ, ಹೊತ್ತು ತರುವುದರಲ್ಲೇ ಅರ್ಥವಿಲ್ಲ. ದುಃಖವನ್ನು ಮೆರವಣಿಗೆಯಲ್ಲಿ ಹೊತ್ತೊಯ್ಯುವ ಹಿಂಸೆ ಮತ್ತು ಕ್ರೋಧಗಳು ನೆನಪಿನ ಫಲಗಳು. ನೆನಪೆಂಬ ಮರವೇ ಬೇಡದ ಮೇಲೆ ಅದರ ಫಲಕ್ಕೆಲ್ಲಿಯ ಮನ್ನಣೆ? ಬುದ್ಧ ಅಹಿಂಸೆಯನ್ನು ಬೋಧಿಸುವುದು ಹೀಗೆ. ನಾವು ಅತಿ ಜಾಗ್ರತವಾಗಿ ಯೋಚಿಸಿ ಹಿಂಸೆಯನ್ನು ತ್ಯಜಿಸಬೇಕಿಲ್ಲ. ಕ್ಷಣಿಕವಾದದಲ್ಲಿ ನಾವು ಹುಟ್ಟಿರುವುದೇ ಹಿಂಸೆಯ ಹೊರತಾಗಿ ಬದುಕಲು. ಕರುಣೆ ಮತ್ತು ಪ್ರೀತಿಗಳೂ ನೆನಪನ್ನು ಆಧರಿಸಬೇಕಿಲ್ಲ. ಮುಳುಗಿದಾಗ ಮತ್ತು ತಲೆಯೆತ್ತಿದಾಗ ಬೇರೆ ಬೇರೆ ನೀರಿನ ಪ್ರವಾಹದಂತೆ ಅವು ಆ ಕ್ಷಣಕ್ಕೆ ತಮ್ಮ ಕೆಲಸವನ್ನಷ್ಟೆ ನಿರ್ವಹಿಸುತ್ತವೆ.

ದೇವರೇ ಬೇಕಿಲ್ಲದ ಬೌದ್ಧಧರ್ಮ ಮತ್ತು ಮೂವತ್ತಮೂರು ಕೋಟಿ ದೇವಾನುದೇವತೆಗಳ ಸನಾತನ ಧರ್ಮ ಸ್ನೇಹಿತರಿಬ್ಬರು ಹೆಗಲಮೇಲೆ ಹೆಗಲು ಹಾಕಿಕೊಂಡವರಂತೆ ವಾರಾಣಸಿಯ ಪವಿತ್ರ ನದಿದಂಡೆಯಲ್ಲಿ ಒಟ್ಟಿಗೇ ಬದುಕುತ್ತವೆ. ನಮ್ಮ ಭಾರತದ ಮಣ್ಣಿನ ವಿಶೇಷವದು. ಒಂದರಿಂದಲೇ ಮತ್ತೊಂದು ಹುಟ್ಟಿದ್ದು. ಪುಟ ತುಂಬಿದಾಗ ತಿರುಗಿಸಿ ಬರೆದಂತೆ ಒಂದಕ್ಕೆ ಮತ್ತೊಂದು ನೈಸರ್ಗಿಕವಾಗಿ ಪೂರಕ ಮತ್ತು ಮುಂದುವರೆದ ಭಾಗ. ಸಾರನಾಥದ ಬುದ್ಧ ಕಣ್ಣನ್ನು ಅರೆನಿಮೀಲಿಸಿ, ಅರ್ಥಕ್ಕೆ ಭಾಗಗೊಂಡ ಹಣ್ಣನ್ನು ಮತ್ತೆ ಕೂಡಿಸುವವನಂತೆ ಇರುವ ಮತ್ತು ಇಲ್ಲದಿರುವ ಪ್ರಪಂಚಗಳನ್ನು ಬೆಸುಗೆ ಹಾಕುತ್ತಿರುವಾಗಲೇ, ಅವನಿಂದ ಅನತಿದೂರದಲ್ಲಿ ಸುರನದಿ ಗಂಗೆ ಏದುಸಿರುಪಡುತ್ತ ಹಿಮಾಲಯದಿಂದ ಇಳಿದು ಬರುತ್ತಾಳೆ. ಸ್ವರ್ಗದ ಮಂದಾಕಿನಿ ಶಾಪಗ್ರಸ್ತಳಾಗಿ, ಶಿವನ ಜಟೆಯಲ್ಲಿ ಸಿಲುಕಿ, ನಲುಗಿ, ಸತ್ತವರ ಬೂದಿಯ ಮೇಲೆ ಧುಮಿಕಿ, ತನ್ನ ಅಧಃಪತನವನ್ನು ಮರೆತು ಕೋಟಿಕೋಟಿ ಜೀವಿಗಳ ಪಾಪಗಳನ್ನು ತೊಳೆದು ಪರಿಶುದ್ಧಗೊಳಿಸುವ ಮಹಾಕಾರ್ಯದಲ್ಲಿ ತೊಡಗುತ್ತಾಳೆ. ಅಚ್ಚ ಬಿಳುಪಿನ ಹಿಮಾಲಯದಡಿಯ ಗಂಗೋತ್ರಿಯಲ್ಲಿ ಅತಿಶುಭ್ರವಾದವಳು ಬಂಗಾಲದಲ್ಲಿ ಕಡಲನ್ನು ಕೂಡುವ ಹೊತ್ತಿಗೆ ಪ್ರಪಂಚದ ಭಾರವನ್ನೆಲ್ಲ ಹೊತ್ತು, ಬಳಲಿ ಬೆಂಡಾಗಿ, ದಿನದಂತ್ಯಕ್ಕೆ ಮನೆ ಸೇರುವ ಕೂಲಿಯಾಳಿನಂತಾಗಿರುತ್ತಾಳೆ.

ಚುಮುಚುಮು ಮುಂಜಾನೆಯ ನದಿ ತೀರದಲ್ಲಿ, ಮಸಣವಾಸಿ ಶಿವನಂತೆಯೇ ಬೂದಿ ಬಳಿದುಕೊಂಡ, ಜಟೆಯನ್ನು ಹೊತ್ತ, ಸಾಧುವೊಬ್ಬ ಮತ್ತೊಂದು ದಿನಕ್ಕೆ ಅಣಿಯಾಗ ಹೊರಟು, ಹಸಿಮಣ್ಣಿನಲ್ಲಿ ತ್ರಿಶೂಲವನ್ನು ನೆಟ್ಟು, ಎದೆಸೆಟೆದು ಪಾದಗಳನ್ನು ಅಗಲಿಸಿ ನಿಂತು, ಕೈಗಳೆರಡನ್ನು ಸೊಂಟಕ್ಕೆ ಒತ್ತಿ, ತಲೆ ಎತ್ತಿ ಕ್ಷಣಕ್ಕೆ ಸ್ವರ್ಗವನ್ನು ದಿಟ್ಟಿಸಿ, ಮರುಕ್ಷಣದಲ್ಲೇ, ಹರಿವ ನದಿಗೆ ಚಿಮ್ಮುಮೀನಿನಂತೆ ಮುಳುಗು ಹಾಕುತ್ತಾನೆ. ಯಾವ ಭೇದವಿಲ್ಲದ ಗಂಗೆ ತನ್ನ ಕೋಮಲ ಕೈಗಳಿಂದ ಎಳೆಗೂಸಿಗೆ ಜಳಕ ಮಾಡಿಸುವವಳಂತೆ ಅವನ ಮೈಯನ್ನು ಹಿತವಾಗಿ ತೊಳೆಯುತ್ತಾಳೆ. ಬಳಿದ ಬೂದಿ ನೀರಿಗೆ ಕರಗುತ್ತದೆ. ನೀರಿನ ಹರಿವಿಗೆ ಗಂಟುಗಂಟಿನ ಜಟೆ ಬಿಚ್ಚಿ ಸುತ್ತಕ್ಕು ಹರಡುತ್ತದೆ.

ಬರೀ ಮೈಯ ಬಾಬಾ ನೀರಿಗೆ ಹಾರಿದ ಕ್ಷಣಕ್ಕೇ, ಅಲ್ಲೇ ಸಮೀಪದಲ್ಲೇ, ಅತಿಸುಂದರ ವಿಗ್ರಹದಲ್ಲಿ ಎರಡೂಕಾಲು ಸಾವಿರ ವರ್ಷಗಳಿಂದ ಅಂತರ್ಧಾನನಾಗಿ ಕುಳಿತ ಬುದ್ಧನ ಮುಖದ ಮೇಲಿನ ತೆಳುನಗೆಯು ಒಂದು ಮಿಲಿಮೀಟರಿನಷ್ಟು ಹೆಚ್ಚಾದಂತೆ ಕಂಡದ್ದು ನಿಜವೋ, ಬರೀ ನಮ್ಮ ಭ್ರಾಂತೋ; ಹೇಳುವವರು ಯಾರು? ಅಂತಹ ಪ್ರಶ್ನೆಗಳಿಗೆ ಬುದ್ಧನಂತೂ ಉತ್ತರಿಸುವುದಿಲ್ಲ.

ಪ್ರತಿಕ್ರಿಯಿಸಿ: feedback@sudha.co.in